ಅಧಿಕಾರಿಗಳು ಸರಿಯಾದ ರೀತಿಯಲಿ ಕೆಲಸ ಮಾಡದೇ ಇರುವ ರೀತಿಯ ವಾತಾವಣವನ್ನು ಸರ್ಕಾರ ಸೃಷ್ಟಿ ಮಾಡಿದೆ. ಅವರು ವೀಕೆಸ್ಟ್ Home Minister ಎಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಅವರ ರಾಜೀನಾಮೆಯನ್ನು ಆಗ್ರಹಿಸಿ ನಮ್ಮ ಪಕ್ಷದವರೂ ಕೂಡ ಇವರ ನಿಲುವನ್ನು ಖಂಡಿಸಿ ನಾವೂ ಕೂಡ ವಾಕ್ ಔಟ್ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಜೆಡಿಎಸ್ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿಸದನದಿಂದ ಹೊರ ನಡೆದರು)

8. **ಪ್ರಕಟಣೆ**

ವಿಷಯ: ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯಲ್ಲಿ ತೆಗೆದುಕೊಂಡ ತೀರ್ಮನ.

ಈ ದಿನ ದಿನಾಂಕ 24.02.2009 ರಂದು ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ ಈ ಕೆಳಕಂಡ ತೀರ್ಮಾನಗಳನ್ನು ಕೈಗೊಳ್ಳಲಾಗಿದೆ.

1. ದಿನಾಂಕ 27ನೇ ಫೆಬ್ರವರಿ, 2009ರ ಶುಕ್ರವಾರದವರೆಗೆ ಅಧಿವೇಶನವನ್ನು ನಡೆಸಿ ಪ್ರತಿದಿವಸ ಕಾರ್ಯಕಲಾಪಗಳನ್ನು ಬೆಳಿಗ್ಗೆ 11.00 ಗಂಟೆಯಿಂದ ಸಂಜೆ 7.00 ಗಂಟೆಯವರೆಗೆ ನಡೆಸಲಾಗುವುದು.

2. ದಿನಾಂಕ 26.02.2009ರಂದು ವಿತ್ತೀಯ ಕಾರ್ಯಕಲಾಪಗಳ ಚರ್ಚೆ ಪೂರ್ಣಗೊಳ್ಳಲಿದ್ದು, ದಿನಾಂಕ 27.02.2009ರಂದು ಬೆಳಿಗ್ಗೆ ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ ಮತ್ತು ಧನವಿನಿಯೋಗ ವಿಧೇಯಕಗಳನ್ನು ಹಾಗೂ ಆಯವ್ಯಯಕ್ಕೆ ಸಂಬಂಧಪಟ್ಟ ಇತರೆ ವಿತ್ತೀಯ ವಿಧೇಯಕಗಳ ಅಂಗೀಕಾರ.

ಅಧ್ಯಕ್ಷರು: ಈಗ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

[ಸದನವು 6.00 ಗಂಟೆ 40 ನಿಮಿಷಕ್ಕೆ ಮುಕ್ತಾಯವಾಗಿ ದಿನಾಂಕ 25.02.2009ರಂದು ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ನಿರ್ಧರಿಸಿತು.]

7 ಶ್ರೀ ರುದ್ರೇಶಗೌಡ ವೈ.ಎನ್(ವಿಧಾನಸಭಾ ಸದಸ್ಯರು)
ಸಿ.ಎಂ.ಉದಾಸಿ(ಲೋಕೋಪಯೋಗಿ ಸಚಿವರು)

ಅ) 2008–09ನೇ ಸಾಲಿನಲ್ಲಿ ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆ ವತಿಯಿಂದ ರಸ್ತೆಗಳ ಮರು ಡಾಂಬರೀಕರಣ ಕಾಮಗಾರಿ ಮಂಜೂರಾಗಿದೆಯೇ;

ಒಟ್ಟು 5 ಕಾಮಗಾರಿಗಳು ಮಂಜೂರಾಗಿವೆ.

ಆ) ಹಾಗಿದ್ದಲ್ಲಿ ಯಾವ ಯಾವ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ (ವಿವರ ನೀಡುವುದು)

(1) ಲೆಕ್ಕಶೀರ್ಷಿಕೆ 5054 ಎಸ್‌ಸಿಎಸ್‌ಪಿ ಅಡಿಯಲ್ಲಿ ರೂ.18.62 ಲಕ್ಷಗಳ ಅನುದಾನದ 3 ಕಾಮಗಾರಿಗಳು ಮಂಜೂರಾಗಿದ್ದು, ಸಂಪೂರ್ಣ ಅನುದಾನ ಬಿಡುಗಡೆಗೊಂಡಿದೆ.

(2) ಲೆಕ್ಕಶೀರ್ಷಿಕೆ 5054 ಓಆರ್‌ಐಫ್ ಅಡಿಯಲ್ಲಿ ರೂ.225.00 ಲಕ್ಷಗಳ ಅಂದಾಜಿನ 2 ಕಾಮಗಾರಿಗಳು ಮಂಜೂರಾಗಿದ್ದು, ರೂ.68.00 ಲಕ್ಷ ಅನುದಾನ ಬಿಡುಗಡೆಯಾಗಿದೆ.

(3) ಲೆಕ್ಕಶೀರ್ಷಿಕೆ 5054 ನಬಾರ್ಡ್ ಯೋಜನೆ ಅಡಿಯಲ್ಲಿ ರೂ.155.00 ಲಕ್ಷಗಳ ಒಂದು ಕಾಮಗಾರಿಯು ಪ್ರವಾಸೋದ್ಯಮ ಇಲಾಖೆಯಿಂದ ಮಂಜೂರಾಗಿದ್ದು, ರೂ.100.00 ಲಕ್ಷಗಳ ಅನುದಾನ ಬಿಡುಗಡೆಯಾಗಿದೆ.

ಇ) ಮರುಡಾಂಬರೀಕರಣಕ್ಕಾಗಿ ಯಾವ ಯಾವ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ(ವಿವರ ನೀಡುವುದು)

ವಿವರಗಳನ್ನು ಅನುಬಂಧದಲ್ಲಿವೆ.

ಅನುಬಂಧ

ವಿಧಾನ ಸಭಾ ಸದಸ್ಯರಾದ ಶ್ರೀ ವೈ.ಎನ್.ರುದ್ರೇಶ್‌ಗೌಡರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 7ಕ್ಕೆ ಉತ್ತರ ಬೇಲೂರು ತಾಲ್ಲೂಕಿನಲ್ಲಿ ಮರುಡಾಂಬರೀಕರಣಕ್ಕಾಗಿ ಕೈಗೆತ್ತಿಕೊಳ್ಳಲಾಗಿರುವ ರಸ್ತೆ ಕಾಮಗಾರಿಗಳ ವಿವರ

ಕ್ರ ಸಂ	ಲೆಕ್ಕಶೀರ್ಷಿಕೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ	ಕಾಮಗಾರಿ ಪ್ರಗತಿ
1.	5054–ಎಸ್‌ಸಿಎಸ್‌ಪಿ	ಹಳೇಬೀಡು–ಗಂಗೂರು ರಸ್ತೆ ಕಿ.ಮೀ 5.00 ರಿಂದ 8.50ವರೆಗೆ ರಸ್ತೆ ಅಭಿವೃದ್ಧಿ	7.46	ಟೆಂಡರ್ ಅನುಮೋದನೆಗೊಂಡಿದೆ. ಕಾರ್ಯಾದೇಶ ನೀಡಲಾಗುತ್ತಿದೆ.
2.		ಕಂದಲಿ–ಬೈಲಹಳ್ಳಿ–ಪಡುವಳಲು–ಬಿಕ್ಕೋಡು ರಸ್ತೆ ಕಿ.ಮೀ 22.00ರಿಂದ 23.00ವರೆಗೆ ರಸ್ತೆ ಅಭಿವೃದ್ಧಿ	8.56	ಟೆಂಡರ್ ಅನುಮೋದನೆಗೊಂಡಿದೆ ಕಾರ್ಯಾದೇಶ ನೀಡಲಾಗುತ್ತಿದೆ.
3.		ಬಿರಡಹಳ್ಳಿ, ನಾರ್ವೆ ಸೂಳೆಗುಡ್ಡ ರಸ್ತೆ ಕಿ.ಮೀ 16.50 ರಿಂದ 17.00ವರೆಗೆ ಅಭಿವೃದ್ಧಿ	2.60	ಕಾಮಗಾರಿ ಪ್ರಗತಿಯಲ್ಲಿದೆ.
4.	5054–ಓಆರ್‌ಎಫ್	ಮೂಡಿಗೆರೆ–ಬೇಲೂರು ಜಿಲ್ಲಾ ಮುಖ್ಯ ರಸ್ತೆ ಕಿ.ಮೀ 23.75ರಿಂದ 32.20ವರೆಗೆ ಅಭಿವೃದ್ಧಿ ಹಾಗೂ ಮರುಡಾಂಬರೀಕರಣ	100.00	ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.
5.		ಬೇಲೂರು–ಕೊಡ್ಲಿಪೇಟೆ ರಾಜ್ಯ ಹೆದ್ದಾರಿ–110ರ ರಸ್ತೆ ಕಿ.ಮೀ 0.00ರಿಂದ 9.00ವರೆಗೆ ಅಭಿವೃದ್ಧಿ ಹಾಗೂ ಡಾಂಬರೀಕರಣ	125.00	ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.
6.	5452–ನಬಾರ್ಡ್	ಬೇಲೂರು ದೇವಸ್ಥಾನ ಕೂಡು ರಸ್ತೆ ಕಿ.ಮೀ 0.00ರಿಂದ 1.40ವರೆಗೆ ಅಭಿವೃದ್ಧಿ ಕಾಮಗಾರಿ (ಪ್ರವಾಸೋದ್ಯಮ ಇಲಾಖೆ)	165.00	ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.